# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ</u>

# <u>ಬಳ್ಳಾರಿ</u>

## <u>ಸತ್ರ ಮೊಕದ್ದಮೆ ಸಂಖ್ಯೆಃ34/2025</u>

**<u>ಪಿ.ಡಬ್ಲ್ಯೂಃ 12 (ಸಿಡಬ್ಲ್ಯೂಃ19 )</u>**

| | | |
|---|---|---|
| **ಸಾಕ್ಷಿದಾರರ ಹೆಸರು** | **:** | **ಶ್ರೀ ನಾಗರಾಜ** |
| **ತಂದೆಯ ಹೆಸರು** | **:** | **ಸಿದ್ದಪ್ಪ** |
| **ವಯಸ್ಸು** | **:** | **56 ವರ್ಷ** |
| **ಕೆಲಸ** | **:** | **ಸೆಕ್ಷನ್ ಆಫೀಸರ್** |
| **ವಾಸ ಸ್ಥಳ** | **:** | **ಸಿರುಗುಪ್ಪ** |

**<u>ಸಾಕ್ಷಿಯನ್ನು ದಿನಾಂಕ 04.03.2026 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

ಕಳೆದ 16 ವರ್ಷದಿಂದ ನಾನು ಕೆಇಬಿ ಸಿರುಗುಪ್ಪದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

**2.** ದಿಃ27.2.2025 ರಂದು ರಾತ್ರಿ 10.30 ರಿಂದ 11.00 ಗಂಟೆ ಅವಧಿಯಲ್ಲಿ ಕುರುವಳ್ಳಿ ಗ್ರಾಮದ ಹಚ್ಚೊಳ್ಳಿಯಲ್ಲಿ ವಿದ್ಯುತ್ ಪ್ರಸಾರ ಇತ್ತೋ ಎಂದು ಕೇಳಿ ದಿಃ3.3.2025 ರಂದು ಹಚ್ಚೊಳ್ಳಿಪೊಲೀಸರು ಪತ್ರ ಬರೆದಿರುತ್ತಾರೆ. ಸದರಿ ಪತ್ರವನ್ನು ನಿಪಿ.16 ಎಂದು ಗುರುತಿಸಲಾಯಿತು. ನಾನು ಲಾಗ್ ಶೀಟ್ ನ್ನು ಪರಿಶೀಲಿಸಿ ದಿಃ27.2.2025 ರಂದು ರಾತ್ರಿ 10.30 ರಿಂದ 11.00 ಗಂಟೆ ಅವಧಿಯಲ್ಲಿ ವಿದ್ಯುತ್ ಪ್ರಸಾರ ಇತ್ತು ಎಂದು ವರದಿ ನೀಡಿದ್ದೇನೆ.

**S.C.No. 34/2025**
**P.W. 12 (C.W.19 )**
**Date : 04.03.2026**

ನಾನು ನೀಡಿದ ವರದಿ ಮತ್ತು ಲಾಗ್ ಶೀಟ್ ನ್ನು ಗುರುತಿಸುತ್ತೇನೆ. ಅದನ್ನು **ನಿಪಿ.17** ಎಂದು ಸಾಕ್ಷಿಯ ಸಹಿಯನ್ನು **ನಿಪಿ.17 ಎ** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀಮತಿ ಹೆಚ್ ಆರ್ ಜೆಃ (ಎಲ್ ಎಡಿ ಸಿ ) ವಕೀಲರಿಂದ:**

**3.** ನಿಪಿ.16 ರಲ್ಲಿ ನಾನು ಪತ್ರವನ್ನು ಪಡೆದುಕೊಂಡು ಸಹಿ ಮತ್ತು ದಿನಾಂಕವನ್ನು ನಮೂದಿಸಿದ್ದೇನೆ. ನನ್ನ ವರದಿಯನ್ನು ನಾನು ದಿಃ 26.3.2025 ರಂದು ನೀಡಿದ್ದೇನೆ. ಲಾಗ್ ಶೀಟ್ ನ್ನು ಡೈಲಿ ಬೇಸಿಸ್ ಮೇಲೆ ತಯಾರಿಸುತ್ತೇನೆ. ಸದರಿ ಲಾಗ್ ಶೀಟ್ ನ ನಕಲನ್ನು ನಾನು ನೀಡಿದ್ದೇನೆ. ದಿಃ4.3.2025 ರಂದು ನಾನು ಪೊಲೀಸರಿಂದ ಕೋರಿಕೆ ಪತ್ರ ಪಡೆದದ್ದರು ಸಹ ದಿಃ 26.3.2025 ರಂದು ಲಾಗ್ ಶೀಟ್ ನೀಡಿರುತ್ತೇನೆ. ವಿಳಂಬಕ್ಕೆ ಕಾರಣ ಏನು ಎಂದು ನನಗೆ ಹೇಳಲು ಆಗುವುದಿಲ್ಲ. ಪೊಲೀಸರಿಗೆ ಅನುಕೂಲ ಮಾಡುವ ಸಲುವಾಗಿ ಲಾಗ್ ಶೀಟ್ ನ್ನು ತಯಾರಿಸಿಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

**ಮರು-ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

**ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ)**

**ಓ.ಹೇ.ಕೆ. ಸರಿ ಇದೆ.**

\

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಬಳ್ಳಾರಿ.**